ಮಜೂರಿ ಇತ್ಯಾದಿಗಳು ಹಾಗೂ ಸ್ಥಿರ ವೆಚ್ಚಗಳಾದ ಕೃಷಿ ಉಪಕರಣಗಳ ಮೇಲೆ ಹೂಡಿದ ಬಂಡವಾಳಕ್ಕೆ ಬಡ್ಡಿ, ಭೂ ಕಂದಾಯ; ತೆರಿಗೆ, ಹೂಡಿದ ಬಂಡವಾಳಕ್ಕೆ ಬಡ್ಡಿ, ನಿರ್ವಹಣಾ ಸಂಭಾವನೆ, ಗೇಣಿ ಮೌಲ್ಯ, ಇತ್ಯಾದಿಗಳು ಸೇರಿರುತ್ತವೆ.

(ಆಧಾರ:ಬೆಳೆಗಳ ವಲಯವಾರು ಸಾಗುವಳಿ ವೆಚ್ಚದ 1999–2000 ರ ವರದಿ)

ಬಿಜಾಪುರ ಜಿಲ್ಲೆಯ ತೋಟಗಾರಿಕಾ ಇಲಾಖೆಯ ದ್ರಾಕ್ಷಿ ಯೋಜನಾ ವಿಭಾಗದ ಕಾರ್ಯಗಳ ಬಗ್ಗೆ

4254 (4883) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತ್ರಿಕೋಟ)ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯ ತೋಟಗಾರಿಕೆ ಇಲಾಖೆಯಲ್ಲಿ ದ್ರಾಕ್ಷಿ ಯೋಜನಾ ವಿಭಾಗ ಕಾರ್ಯನಿರ್ವಹಿಸುತ್ತಿದೆಯೇ;

ಆ) ಈ ದ್ರಾಕ್ಷಿ ಯೋಜನೆ ವಿಭಾಗದ ಕಾರ್ಯಗಳೇನು;

ಇ) ವಿಭಾಗಕ್ಕೆ ಮಂಜೂರಾದ ಹುದ್ದೆಗಳೆಷ್ಟು; ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳೆಷ್ಟು;

ಈ) ದ್ರಾಕ್ಷಿ ಯೋಜನಾ ವಿಭಾಗವು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಿಬ್ಬಂದಿಗಳ ಕೊರತೆ ಇರುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು;

ಉ) ದ್ರಾಕ್ಷಿ ಹೆಚ್ಚಾಗಿ ಬೆಳೆಯುವ ಈ ಜಿಲ್ಲೆಯಲ್ಲಿಯೇ ದ್ರಾಕ್ಷಿ ಯೋಜನಾ ಕಾರ್ಯ ಚಟುವಟಿಕೆಗಳು ಶೂನ್ಯವಾಗಿರುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುವುದು;

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು):

ಅ) ಕಾರ್ಯನಿರ್ವಹಿಸುತ್ತಿದೆ

ಆ) ಈ ವಿಭಾಗವು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ) ಬಿಜಾಪುರ ರವರ ಅಧೀನದಲ್ಲಿದ್ದು ದ್ರಾಕ್ಷಿಗೆ ಸಂಬಂಧಪಟ್ಟ ವಿಷಯ/ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

ಇ) 3 ಹುದ್ದೆಗಳು

ಹಾಲಿ ಎಲ್ಲಾ ಹುದ್ದೆಗಳು ಖಾಲಿಯಿರುತ್ತವೆ.

ಈ) ಸ್ಥಳೀಯ ಇಲಾಖಾ ಪ್ರಭಾರಿ ಅಧಿಕಾರಿಗಳು ದ್ರಾಕ್ಷಿಯೋಜನೆ ಅನುಷ್ಠಾನಗಳ ಕೆಲಸಗಳನ್ನು ನಿರ್ವಹಿಸುತ್ತಿರುತ್ತಾರೆ ದ್ರಾಕ್ಷಿ ಯೋಜನಾ ವಿಭಾಗದಲ್ಲಿ ಖಾಲಿಯಿರುವ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

ಉ) ಬಿಜಾಪುರ ಜಿಲ್ಲೆಯಲ್ಲಿ ಇಲಾಖೆಯಿಂದ ಹೆಚ್ಚಿನ ರೀತಿಯ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ ಮತ್ತು ದ್ರಾಕ್ಷಿ ಅಭಿವೃದ್ಧಿಗಾಗಿ ಇಲಾಖೆಯಿಂದ ಅನೇಕ ರೈತಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯ ದ್ರಾಕ್ಷಿ ರೈತರುಗಳಿಗೆ ಪ್ರದೇಶ ವಿಸ್ತರಣಾ, ಮಿನಿಕಿಟ್‌ಗಳ ವಿತರಣೆ, ಪ್ಲಾಸ್ಟಿಕ್ ಕ್ರೇಟ್ ಹಾಗೂ ಕಾರೋಗೇಟೆಡ್ ಕಾರ್ಡ್‌ಬೋರ್ಡ್ ಬಾಕ್ಸ್‌ಗಳ (ಒಣದ್ರಾಕ್ಷಿಪ್ಯಾಕಿಂಗ್‌ಗಾಗಿ) ವಿತರಣೆ, ಪಕ್ಷಿ ನಿರೋಧಕ ಬಲೆಗಳ ವಿತರಣೆ ಪ್ರತಿಕೂಲ ಹವಾಮಾನದಲ್ಲಿ

ಬೆಳದ ದ್ರಾಕ್ಷಿಯನ್ನು ರಕ್ಷಿಸಲು ಪಾಲಿಥೀನ ಹಾಳೆಗಳ ವಿತರಂಎ, ದ್ರಾಕ್ಷಿಯನ್ನು ಬಿಸಿಲಿನ ತಾಪದಿಂದ ರಕ್ಷಿಸಲು ನೆರಳು ಪರದೆಗಳ ವಿತರಣೆ. ದ್ರಾಕ್ಷಿಯನ್ನು ಹೊರದೇಶಗಳಿಗೆ ರಫ್ತು ಮಾಡಲು ರೈತರಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು, ಇತ್ಯಾದಿ ಕಾರ್ಯಕ್ರಮಗಳಡಿ ಸವಲತ್ತುಗಳನ್ನು ನೀಡಲಾಗಿದೆ.

ಬಿಜಾಪುರ ಜಿಲ್ಲೆ ಸೇರಿದಂತೆ ದ್ರಾಕ್ಷಿ ರಫ್ತುವಲಯವನ್ನು ಸ್ಥಾಪಿಸಲು ಕೇಂದ್ರ ಸರ್ಕಾರದ ಅಪೇಡಾ ಸಂಸ್ಥೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಬಿಜಾಪುರ ಜಿಲ್ಲೆಯನ್ನು ತೋಟಗಾರಿಕಾ ಜಿಲ್ಲೆಯನ್ನಾಗಿ ಘೋಷಿಸುವ ಬಗ್ಗೆ

4255 (4884) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತ್ರಿಕೋಟ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿ ಎಷ್ಟೆಷ್ಟು ಪ್ರದೇಶದಲ್ಲಿ ಯಾವ ಯಾವ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದೆ; ಅವುಗಳ ಪ್ರಮಾಣ ಎಷ್ಟು;

ಆ) ಜಿಲ್ಲೆ ತೋಟಗಾರಿಕೆ ಬೆಳೆಗಳನ್ನು ಬೆಳೆಯುವಲ್ಲಿ ರಾಜ್ಯದಲ್ಲಿ ವಿಜಾಪುರ ಜಿಲ್ಲೆಯು ಎಷ್ಟನೇ ಸ್ಥಾನದಲ್ಲಿದೆ;

ಇ) ವಿಜಾಪುರ ಜಿಲ್ಲೆಯನ್ನು ತೋಟಗಾರಿಕಾ ಜಿಲ್ಲೆ ಎಂದು ಘೋಷಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಈ) ವಿಜಾಪುರ ಜಿಲ್ಲೆಯನ್ನು ತೋಟಗಾರಿಕಾ ಜಿಲ್ಲೆ ಎಂದು ಘೋಷಿಸಲಾಗಿದೆಯೇ;

ಉ) ಹಾಗಿದ್ದರೆ, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ; ವಿಳಂಬಕ್ಕೆ ಕಾರಣಗಳೇನು;

ಊ) ಯಾವ ಕಾಲಮಿತಿಯಲ್ಲಿ ತೋಟಗಾರಿಕಾ ಜಿಲ್ಲೆ ಎಂದು ಘೋಷಿಸಲಾಗುವುದು?

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು):

ಅ) ವಿಜಾಪುರ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳನ್ನು ಒಟ್ಟು 46,361 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ಒಟ್ಟು ಉತ್ಪಾದನೆ 7.31 ಲಕ್ಷ ಟನ್‌ಗಳಷ್ಟಿದೆ. ವಿಜಾಪುರ ಜಿಲ್ಲೆಯಲ್ಲಿ ಬೆಳೆಯಲಾಗುತ್ತಿರುವ ತೋಟಗಾರಿಕೆ ಬೆಳೆಗಳ ವಿವರ, ಪ್ರದೇಶ ಹಾಗೂ ಪ್ರಮಾಣದ ಬೆಳೆವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ತೋಟಗಾರಿಕೆ ಬೆಳೆಗಳನ್ನು ಬೆಳೆಯುವಲ್ಲಿ ರಾಜ್ಯದಲ್ಲಿ ವಿಜಾಪುರ ಜಿಲ್ಲೆಯು 16ನೇ ಸ್ಥಾನದಲ್ಲಿದೆ.

ಇ) ಇಲ್ಲ

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

ಊ) ಉದ್ಭವಿಸುವುದಿಲ್ಲ